ಕತೆ

ಫ್ರೆಂಚ್ ಮಸ್ಕ್ ವಾಸನೆ ಸಿಗರೇಟು ವಾಸನೆಯೊಂದಿಗೆ ಬೆರೆತು ಬೇರೊಂದು ವಿಚಿತ್ರ ವಾಸನೆಯನ್ನು ಸೃಷ್ಟಿಸಿತ್ತು. "ನಾನು ಸಿಗರೇಟು ಸೇದುತ್ತಿರುವುದು ನಿನಗೆ ಅಭ್ಯಂತರವಿಲ್ಲ ತಾನೆ" ಎಂದು ಸೋಫಾದ ಮೇಲೆ ಅಟೆನ್ಷನ್ ರೀತಿಯಲ್ಲಿ ಕುಳಿತು ಕೇಳಿದ್ದ. "ತೊಂದರೆಯಿಲ್ಲ, ನಾನೂ ದಿನಕ್ಕೆ ಒಂದು ಪ್ಯಾಕ್ ಸೇದ್ತೀನಿ. ಸಿಗರೇಟಿಗೂ ಮೆದುಳಿನ ನರಗಳಿಗೂ ಏನೋ ಒಂದು ರೀತಿಯ ಅನ್ಯೋನ್ಯ ಅನುಬಂಧ ಇದೆಯೆನಿಸುತ್ತದೆ. ಎಂಥಾ ಟೆನ್ಷನ್ನಿನಲ್ಲಿದ್ದರೂ ಸಿಗರೇಟು ಸೇದಿದಾಗ ರಿಲ್ಯಾಕ್ಸ್ ಆಗುವುದಿದೆಯಲ್ಲ ನಿಜಕ್ಕೂ ಅದೊಂದು ಅನನ್ಯ ಅನುಭೂತಿಯೇ ಸರಿ..." ಎಂದು ಸಿಗರೇಟು ಸೇದುವ ನನ್ನ ಅಭ್ಯಾಸವನ್ನು ಅನಾವರಣಗೊಳಿಸಿದ್ದೆ. "ನನಗೆ ಗೊತ್ತಿದೆ, ನೀನು ವಾರದಿಂದಲೂ ತುಂಬಾ ದಣಿದಿದ್ದೀಯ ಅಂತ. ಆದರೂ ನಿನ್ನನ್ನು ಮಾತನಾಡಿಸುವ ಕುತೂಹಲವನ್ನು ತಡೆದುಕೊಳ್ಳಲು ನನ್ನಿಂದಾಗಲಿಲ್ಲ. ಅದೂ ಅಲ್ಲದೇ ನಾಳೆ ಬೆಳಗ್ಗೆ ನಾನು ಅನ್ನವರಂಗೆ ಹೊರಟಿದ್ದೇನೆ..." ಎಂದವನ ಮಾತುಗಳು ಚಿಕ್ಕಂದಿನಲ್ಲಿ ಅಮ್ಮ ಅವನ ಬಗ್ಗೆ ಹೇಳಿದ್ದ ಸಣ್ಣ ಗುಟ್ಟೊಂದನ್ನು ನೆನಪಿಸಿತ್ತು. ಸ್ಕೂಲಿನಲ್ಲಿ ಕೆಲವರು ಅವನನ್ನು 'ಸತ್ಯ' ಎಂದು ಕರೆದರೆ, ಕೆಲವರು 'ಡಿಕ್ಯಾಸ್ಟ್ರೊ' ಎಂದು ಕರೆಯುತ್ತಿದ್ದರು. ಡಿಕ್ಯಾಸ್ಟ್ರೊ ಎಂದು ಉಚ್ಚರಿಸಲಾಗದಿದ್ದವರು ಬರಿ 'ಡಿಕಿ' ಎಂದೇ ಕರೆಯುತ್ತಿದ್ದರು. ಟೀಚರುಗಳು ಮಾತ್ರ ಅಟೆಂಡೆನ್ಸ್ ತೆಗೆದುಕೊಳ್ಳುವಾಗ 'ಸತ್ಯ ಡಿಕ್ಯಾಸ್ಟ್ರೊ' ಎಂದೇ ಕೂಗುತ್ತಿದ್ದರು. ಒಂದು ದಿನ ಆ ಬಗ್ಗೆ ಅಮ್ಮನನ್ನು ಕೇಳಿದಾಗ, "ಮದುವೆಯಾದ ಹತ್ತು ವರ್ಷಗಳವರೆಗೂ ಡಿಕ್ಯಾಸ್ಟ್ರೊನ ತಂದೆ ತಾಯಿಗೆ ಮಕ್ಕಳಾಗಿರಲಿಲ್ಲ. ಅನ್ನವರಂಗೆ ಹೋಗಿ ಎರಡು ಕೇಜಿ ತೂಕದ ಬಂಗಾರದ ತೂಗುದೀಪವನ್ನು ಸತ್ಯನಾರಾಯಣ ಸ್ವಾಮಿಗೆ ಅರ್ಪಿಸಿ ಅನ್ನ ಸಂತರ್ಪಣೆ ಮಾಡಿಸಿ ಬಂದ ಎರಡೇ ತಿಂಗಳಲ್ಲಿ ಅವರಮ್ಮ ಬಸುರಾದಳಂತೆ. ಗಂಡು ಆಗಿದ್ದರಿಂದ ಸತ್ಯ ಡಿಕ್ಯಾಸ್ಟ್ರೊ ಎಂದು ಹೆಸರಿಟ್ಟರಂತೆ. ಆ ಕುಟುಂಬದ ಧರ್ಮ ಸಹಿಷ್ಣುತೆಯನ್ನು ಮೆಚ್ಚಬೇಕು..." ಎಂದು ಖುಷಿಯಿಂದ ಹೇಳಿದ್ದಳು. ಅದು ನೆನಪಾಗಿ, "ಓಹ್ ಮರೆತಿದ್ದೆ, ನೀನು ಅನ್ನವರಂನ ಸತ್ಯನಾರಾಯಣ ಸ್ವಾಮಿಯ ವರದಿಂದ ಹುಟ್ಟಿದವನಲ್ಲವೆ. ಅಲ್ಲಿನ ಎ.ಸಿ.ಪಿಗೆ ಹೇಳಿ ಸ್ಪೆಷಲ್ ದರ್ಶನಕ್ಕೆ ಏರ್ಪಾಡು ಮಾಡ್ತೀನಿ..." ಎಂದಿದ್ದೆ. "ಓಹ್, ಹಳೆಯ ವಿಚಾರವನ್ನು ಮರೆತಿಲ್ಲ ನೀನು. ದಟ್ಸ್ ಗುಡ್. ಆದರೆ, ನಾನು ಕಾಮನ್ ಕ್ಯೂನಲ್ಲಿಯೇ ಹೋಗಿ ದರ್ಶನ ಪಡೆಯಬೇಕೆಂದಿದ್ದೇನೆ. ದೇವರ ದರ್ಶನಕ್ಕೆ ಇನ್‌ಫ್ಲೂಯೆನ್ಸ್ ಮಾಡಿಸೋದು ನನಗೇಕೊ ತಮಾಷೆ ಅನ್ನಿಸ್ತಾ ಇದೆ" ಎಂದವನು ನನ್ನ ಕಡೆಗೊಂದು ಸಿಗರೇಟು ಚಾಚುತ್ತಾ, "ಅರೆ, ಅಂದ ಹಾಗೆ ಮರೆತಿದ್ದೆ ನೋಡು. ಇಬ್ರಾಹಿಂ ಅರೆನಳ್ಳಿ, ಹೇಗಿದ್ದಾನೆ, ಎಲ್ಲಿದ್ದಾನೆ ಈಗ. ಅವನನ್ನೂ ನೋಡಿ ಇಪ್ಪತ್ತೈದು ವರ್ಷಗಳ ಮೇಲಾಯಿತು. ನನಗೆ ಸ್ಮೋಕಿಂಗ್ ಕಲಿಸಿದ್ದು ಅವನೆ ನೋಡು. ಏಳನೇ ಕ್ಲಾಸಿನಲ್ಲಿ ಇರೋವಾಗ್ಲೆ ಮನೆಯ ಹಿಂದೆಯೇ ಇದ್ದ ಕಾಫಿ ತೋಟದಲ್ಲಿ ಇಬ್ಬರೂ ಸೇರಿಕೊಂಡು ಯಾರಿಗೂ ಕಾಣದಂತೆ ಬೀಡಿ ಸೇದ್ತಾ ಇದ್ವಿ. ಅವನು ಅವರಪ್ಪನ ಜೇಬಿನಿಂದ ಕದ್ದು ಬೀಡಿ ತರೋನು. ಅವನು ಅರ್ಧ ಸೇದಿ ಮಿಕ್ಕಿದ್ದು ನನಗೆ ಕೊಡೋನು. ಒಂದು ಸಾರಿ ಹಾಗೆ ಸೇದುವಾಗ ಅವರಪ್ಪ ಸುಲೆಮಾನ್‌ಗೆ ಸಿಕ್ಕಿ ಬಿದ್ದಿದ್ವಿ. ಸುಲೆಮಾನ್ ನನ್ನ ಹತ್ತಿರ ಬಂದು, "ಒಡೆಯ, ಇವನ ಎಂಜಲು ಬೀಡಿಯನ್ನು ನೀವು ಸೇದೋದುಂಟೆ. ಇವನೊಬ್ಬ ಪೋಲಿ ಪುಂಡ. ಇವನ ಸಹವಾಸ ನಿಮಗೆ ತಕ್ಕದ್ದಲ್ಲ. ತಾತ ಎಡ್ವರ್ಡ್‌ರಿಗೆ ಗೊತ್ತಾದರೆ ಸುಮ್ಮನೆ ಬಿಡಲ್ಲ. ಮತ್ತು ಬೀಡಿ ಹೊಗೆ ಆರೋಗ್ಯಕ್ಕೆ ಒಳ್ಳೆದಲ್ಲ..." ಎಂದು ಬೀಡಿಯನ್ನು ಕಿತ್ತುಕೊಂಡು ಕಾಲಿನಲ್ಲಿ ಹೊಸಕಿ ಹಾಕಿದ್ದ. "ಹಾಗಾದರೆ, ನೀನ್ಯಾಕೆ ಬೀಡಿ ಸೇದ್ತಿಯ ಸುಲೆಮಾನ್, ಸಾಯಲಿಕ್ಕ. ತಾತ ಎಡ್ವರ್ಡ್‌ನ ಸಿಗಾರನ್ನೆ ಅವನಿಂದ ಕಿತ್ತು ಸೇದಿದ್ದೇನೆ ನಾನು" ಥಟ್ಟನೆ ಕೇಳಿದ್ದೆ. ನನ್ನ ಮಾತುಗಳಿಂದ ಇಬ್ರಾಹಿಂ ಕಿಸಕ್ಕನೆ ನಕ್ಕಿದ್ದ. ಸುಲೆಮಾನ್ ಅವಮಾನಿತನಾದವನಂತೆ ಕಂಡರೂ ಏನೂ ಮಾತನಾಡದೆ ಹೋಗಿಬಿಟ್ಟ. ಅವನು ಹೋದ ಕೂಡಲೆ ಇಬ್ರಾಹಿಂ ನಿಕ್ಕರ್ ಜೇಬಿನಲ್ಲಿ ಬಚ್ಚಿಟ್ಟುಕೊಂಡಿದ್ದ ಇನ್ನೊಂದು ಬೀಡಿಯನ್ನು ತೆಗೆದು ಬೆಂಚುಕಲ್ಲಿನ ಸಂದಿಯಲ್ಲಿ ಬಚ್ಚಿಟ್ಟಿದ್ದ ಬೆಂಕಿಪೊಟ್ಟಣ ತೆಗೆದು ಬೀಡಿಯನ್ನು ಹಚ್ಚಿ ಆಕಾಶದ ಕಡೆ ಹೊಗೆ ಬಿಟ್ಟು, ನನಗೂ ಸೇದಲು ಕೊಟ್ಟಿದ್ದ. ಬೆರಳಿಗೆ ಬೆಂಕಿ ತಾಗುವವರೆಗೂ ನಾನು ಬೀಡಿಯನ್ನು ಸುಟ್ಟಿದ್ದೆ. ಅದೇ ಕಡೆ ಅವನನ್ನು ನೋಡಿದ್ದು..." ಪುಟ್ಟ ಕಥೆಯೊಂದನ್ನು